ಓಃಎಸ್ಃನಂ.182/2019

ಡಿ .ಡಬ್ಲ್ಯೂ- 1

ದಿನಾಂಕಃ **15-10-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ** ವಾದಿ ಪರ ಶ್ರೀ ಟಿ ಎಲ್ ಪಿ **ವಕೀಲರಿಂದ**

ನಾನು ಮತ್ತು ವಾದಿ ಅಕ್ಕಪಕ್ಕದ ಮನೆಯ ವಾಸಿಯಾಗಿದ್ದೇವೆ ಎಂದರೆ ಸರಿಯಲ್ಲ. ದಾವ ಸ್ವತ್ತನ್ನು ನಾನು ನೋಡಿರುವುದಿಲ್ಲ. ನೀವು ಸ್ವಾಧೀನದಲ್ಲಿರುವ ದಾವ ಬಿ ಷೆಡ್ಯೂಲ್ ಸ್ವತ್ತು ಎ ಷೆಡೂಲ್ ಸ್ವತ್ತಿನ ಭಾಗ ಆಗಿರುತ್ತದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಸರ್ವೆಯರ್ ರವರಿಂದ ಎ ಷೆಡ್ಯೂಲ್ ಮತ್ತು ಬಿ ಷೆಡ್ಯೂಲ್ ನ್ನು ಅಳತೆ ಮಾಡಿಸಲು ನನಗೆ ಯಾವುದೇ ತಕರಾರು ಇರುವುದಿಲ್ಲ. ಸರ್ವೆ ಮುಖಾಂತರ ಬಿ ಷೆಡ್ಯೂಲ್ ಸ್ವತ್ತು ಎ ಷೆಡ್ಯೂಲ್ ಸ್ವತ್ತಿನಲ್ಲಿ ಒಳಪಟ್ಟಿದೆ ಎಂದು ತಿಳಿದುಬಂದಿದೆ ಎಂದಲ್ಲಿ ಅದನ್ನು ಬಿಟ್ಟುಕೊಡಲು ನಿಮಗೆ ಯಾವುದೇ ತೊಂದರೆ ಇಲ್ಲ ಎಂದರೆ ಸಾಕ್ಷಿ ಅದರ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಬಿ ಷೆಡ್ಯೂಲ್ ಸ್ವತ್ತಿನ ಪೂರ್ವಕ್ಕೆ ದಾವ ಎ ಷೆಡ್ಯೂಲ್ ಬರುತ್ತದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ದಾವ ಬಿ ಷೆಡ್ಯೂಲ್ ಸ್ವತ್ತಿನ ಪಶ್ಚಿಮ ಭಾಗಕ್ಕೆ ಜಮಿಯಾ ಮಸೀದಿ ಬರುತ್ತದೆ ಎಂದರೆ ಸಾಕ್ಷಿ ಹೌದು ಎಂದು ನುಡಿದಿರುತ್ತಾರೆ.

ದಾವ ಬಿ ಷೆಡ್ಯೂಲ್ ಸ್ವತ್ತಿನ ಉತ್ತರ ಭಾಗಕ್ಕೆ ದಾವ ಎ ಷೆಡ್ಯೂಲ್ ಬರುತ್ತದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ದಾವ ಎ ಷೆಡ್ಯೂಲ್ ಸ್ವತ್ತಿನಲ್ಲಿ ಭತ್ತ ಬೆಳೆಯುತ್ತಿದ್ದಾರೆ ಎಂದರೆ ಸಾಕ್ಷಿ ಇರಬಹುದು ಎಂದು ನುಡಿದಿರುತ್ತಾರೆ. ದಾವ ಎ ಷೆಡ್ಯೂಲ್ ಸ್ವತ್ತು ವಾದಿಗೆ ಸೇರಿದ ಜಮೀನು ಆಗಿರುತ್ತದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ನನ್ನ ಅಸಸ್ ಮೆಂಟ್ ಮನೆಯ ಜಾಗದ ಪೂರ್ವಕ್ಕೆ ನನ್ನದೇ ಸೈಟ್ ಬರುತ್ತದೆ, ಪಶ್ಚಿಮಕ್ಕೆ ಜಮೀಯಾ ಮಸೀದಿ ಬರುತ್ತದೆ. ಉತ್ತರಕ್ಕೆ ಗದ್ದೆ ಇದ್ದು ನನ್ನ ಅಸಸ್ ಮೆಂಟ್ ಪತ್ರದಲ್ಲಿ ಏನು ಬರೆದಿರುತ್ತಾರೆಂದು ನನಗೆ ಗೊತ್ತಿಲ್ಲ. ದಕ್ಷಿಣ ಭಾಗಕ್ಕೂ ಚಕ್ಕುಬಂದಿ ನನಗೆ ಗೊತ್ತಿರುವುದಿಲ್ಲ. ನಿಡಿ-2 ಪಂಚಾಯಿತಿಯವರು ನೀಡಿರುತ್ತಾರೆ. ನಿಡಿ-2 ನ್ನು

ಪಂಚಾಯಿತಿಯವರಿಂದ ಪಡೆದು 30 ವರ್ಷಗಳಾಗಿರಬಹುದು. ಸದರಿ ನಿಡಿ-2 ಅಸಸ್ ಮೆಂಟ್ 20 ಇಂಟು 28 ಅಡಿಯ ಜಾಗಕ್ಕೆ ಬರೆಸಿರುತ್ತೇನೆ. ನಿಡಿ-1 ರಲ್ಲಿ 20 ಇಂಟು 15 ಅಡಿ ಎಂದು ನಮೂದು ಇರುತ್ತದೆ ಎಂದರೆ ಸಾಕ್ಷಿಯು ಪಂಚಾಯಿತಿಯವರು ಬರೆದಿರುತ್ತಾರೆಂದು ನುಡಿದಿರುತ್ತಾರೆ. ಅದರ ಚಕ್ಕುಬಂದಿ ನನಗೆ ಹೇಳಲು ಬರುವುದಿಲ್ಲ. ಸದರಿ ದಾಖಲಾತಿಯನ್ನು ನಾನು ಕುಲುಮೆ ಕೆಲಸ ಮಾಡಲು ನೀಡಿರುತ್ತಾರೆ. ದಾವ ಬಿ ಮತ್ತು ಸಿ ಷೆಡ್ಯೂಲ್ ಸ್ವತ್ತು ಎ ಷೆಡ್ಯೂಲ್ ಸ್ವತ್ತಿನ ಭಾಗವಾಗಿದ್ದು, ಅದನ್ನು ನೀಡಲು ಪಂಚಾಯಿತಿಯವರಿಗೆ ಯಾವುದೇ ಅಧಿಕಾರ ಇರುವುದಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ನೀವು ಹಾಜರುಪಡಿಸಿರುವ ನಿಡಿ-1 ಮತ್ತು 2 ರಂತೆ ಯಾವುದೇ ಸ್ವತ್ತು ಅಸ್ತಿತ್ವದಲ್ಲಿ ಇರುವುದಿಲ್ಲ ಎಂದರೆ ಸಾಕ್ಷಿ ನನಗೆ ಪಂಚಾಯಿತಿಯವರು ನೀಡಿರುತ್ತಾರೆಂದು ನುಡಿದಿರುತ್ತಾರೆ. ನ್ಯಾಯಾಲಯದಿಂದ ದಾವ ಷೆಡ್ಯೂಲ್ ಸ್ವತ್ತುಗಳನ್ನು ಅಳತೆ ಮಾಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ವಾದಿಯ ಅನುಮತಿಯಿಂದ ದಾವ ಬಿ ಷೆಡ್ಯೂಲ್ ನಲ್ಲಿ 15 ವರ್ಷಗಳಿಂದ ನೀವು ಬಾಡಿಗೆ ಕಟ್ಟಿಕೊಂಡು ನೀವು ಸ್ವಾಧೀನದಲ್ಲಿರುತ್ತಿರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿದಿರುತ್ತಾರೆ.

ಹಲಸೂರು ಗೇಟ್ ಹತ್ತಿರ ನನ್ನ ಮನೆ ಇರುತ್ತದೆ ಎಂದರೆ ಸರಿ. ನನ್ನ ಮನೆಯಿಂದ ಕುಲುಮೆ ಮನೆ ಪೂರ್ವ ದಿಕ್ಕಿಗೆ ಬರುತ್ತದೆ. 2006ನೇ ಇಸವಿಯಲ್ಲಿ ನನ್ನಹೆಂಡತಿ ಹೆಸರಿಗೆ ಪಂಚಾಯಿತಿಯವರು ಆಶ್ರಯ ಯೋಜನೆಯಡಿ ನೀಡಿರುತ್ತಾರೆ. ಅದಕ್ಕೆ ಸೇರಿದ ಹಕ್ಕುಪತ್ರವನ್ನು ನಾನು ನ್ಯಾಯಲಯಕ್ಕೆ ಹಾಜರುಪಡಿಸಿರುತ್ತೇನೆ. ಹಕ್ಕುಪತ್ರದಲ್ಲಿ ನಮೂದಿಸಿರುವ ಚಕ್ಕುಬಂದಿ ನನಗೆ ಹೇಳಲು ಬರುವುದಿಲ್ಲ. ವಾದಿಗೆ ಸೇರಿರುವ ಬಿ ಮತ್ತು ಸಿ ದಾವ ಷೆಡ್ಯೂಲ್ ಸ್ವತ್ತಿನಲ್ಲಿ ನೀವು ಅನಧೀಕೃತವಾಗಿ ಸ್ವಾಧೀನದಲ್ಲಿದ್ದಿರಾ ಎಂದರೆ ಸರಿಯಲ್ಲ. ವಾದಿಗೆ ದುಡ್ಡು ಕೊಡಬೇಕಾಗುತ್ತದೆ ಎಂದು ನೀವು ತಕರಾರು ಮಾಡುತ್ತಿದ್ದಿರಾ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

ಓ. ಕೇ. ಸ. ಇ. ಎ. ಒ.

Sd/-

1 ನೇ **ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**

**ಪ್ರ.ದ.ನ್ಯಾ.ದಂ.ರವರು,ತರೀಕೆರೆ.**